
# ಸೃಷ್ಟಿ ಮತ್ತು ಮಾನವ

**ಡಾ. ಇ. ವಸಂತ ಕುಮಾರ್**



ಮಾನವನು ತನ್ನ ಸುತ್ತ ಹರಡಿರುವ ವಿಶಾಲ ಪ್ರಪಂಚದಿಂದ ಬೇರೆಯಲ್ಲ. ಆದರೆ ಅವನು ಅದನ್ನು ಕುರಿತು ಹೇಗೆ ಭಾವಿಸುತ್ತಾನೆ? ವಿಜ್ಞಾನ, ಬೌದ್ಧಿಕ ಚಿಂತನೆ, ಅಧ್ಯಾತ್ಮ – ಇವೇ ಮೊದಲಾದ ಕ್ಷೇತ್ರಗಳಲ್ಲಿ ಹಲವರು ಈ ಕುರಿತು ಚಿಂತಿಸಿದ್ದಾರೆ. ಪ್ರಸ್ತುತ ಲೇಖನದಲ್ಲಿ ಈ ಚಿಂತನೆಗಳ ಒಂದು ನೋಟವಿದೆ. ಲೇಖಕರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ನಿವೃತ್ತ ಸಂಖ್ಯಾಶಾಸ್ತ್ರ ಪ್ರಾಧ್ಯಾಪಕರು. ಶ್ರೀರಾಮಕೃಷ್ಣ ಆಶ್ರಮದ ಭಕ್ತರಾಗಿರುವ ಅವರು ಈ ಪತ್ರಿಕೆಯಲ್ಲಿ ಅನೇಕ ಲೇಖನಗಳನ್ನು ಬರೆದಿದ್ದಾರೆ.

ನಾವು ನೋಡುತ್ತಿರುವುದು, ಕೇಳುತ್ತಿರುವುದು ಅನುಭವಿಸುತ್ತಿರುವುದು ಎಲ್ಲವೂ ಸೃಷ್ಟಿಯೇ. ಇದರಲ್ಲಿ ಜಡ-ಚೇತನ ಎರಡೂ ಸೇರಿದೆ. ಸೃಷ್ಟಿಯಲ್ಲಿ ನಮ್ಮ ಇಂದ್ರಿಯಗಳಿಗೆ ಗೋಚರವಾಗದಿರುವ ಭಾಗವೂ ಇದೆ. ಅದೂ ಸೃಷ್ಟಿಯೇ. ಕೆಲವು ನಮಗೆ ಆಪ್ಯಾಯಮಾನವಾಗಿವೆ. ಕೆಲವು ಸುಂದರವಾಗಿವೆ, ಆಕರ್ಷಕವಾಗಿವೆ. ಮತ್ತೆ ಕೆಲವು ಅಷ್ಟೇನೂ ಚೆನ್ನಾಗಿರುವಂತೆ ಕಾಣದೆ ಭಯ ಹುಟ್ಟಿಸುವಂತೆ, ನಮಗೆ ಹಾನಿಯುಂಟುಮಾಡುವಂತೆ ಕಾಣುತ್ತವೆ. ಆದರೂ ಅವೆಲ್ಲ ಸೃಷ್ಟಿಯಲ್ಲಿ ಇವೆ. ಕೆಲವು ಎಲ್ಲಾ ಕಾಲದಲ್ಲಿಯೂ ಕಾಣುತ್ತಿವೆ, ಇದ್ದಹಾಗೆಯೇ ಇರುವಂತೆ ತೋರುತ್ತಿವೆ. ಈಗ ಇದ್ದು ಸ್ವಲ್ಪ ಕಾಲದ ಮೇಲೆ ಕಾಣದಾಗುವುವೂ ಇವೆ; ಇದ್ದರೂ ಯಾವಾಗಲೂ ಬದಲಾಗುವಂತಿವೆ. ಕೆಲವು ಇದ್ದರೂ ಇಲ್ಲದಂತಿವೆ. ನಾವು ಇವುಗಳ ಮಧ್ಯೆ ಜೀವಿಸುತ್ತಿರುವೆವು. ಇವುಗಳಿಂದ ಪ್ರಯೋಜನ ಪಡೆಯಲೆತ್ನಿಸುತ್ತಿರುವೆವು. ಸೃಷ್ಟಿಯಾಗಿರುವುದು ಮಾತ್ರವಲ್ಲದೆ ನಾವೇ ಸೃಷ್ಟಿಸಿರುವುವೂ ಇವೆ — ದಿನನಿತ್ಯದ ಜೀವನಕ್ಕೆ, ಶಿಕ್ಷಣಕ್ಕೆ, ವಿರಾಮ-ವಿಹಾರ-ವಿನೋದಗಳಿಗೆ, ಸಂಚಾರಕ್ಕೆ, ಸಂಕಷ್ಟಗಳ ಪರಿಹಾರಕ್ಕೆ ಬೇಕಾದವು — ಇವೆಲ್ಲಾ ಇವೆ. ಮನಸ್ಸಿಗೆ ಸಂತೋಷ, ಶಾಂತಿಯನ್ನು ಕೊಡುವ ಸುಂದರ ಮನೋಹರವಾದ ಚಿತ್ರ, ಸಂಗೀತ ಮುಂತಾದುವನ್ನು ಸೃಷ್ಟಿಸಿರುವೆವು. ಜತೆಗೆ ನಮ್ಮ ಕಷ್ಟಕಾರ್ಪಣ್ಯಗಳಿಗೆ, ದುಃಖ-ಸಂಕಟಗಳಿಗೆ ಅಶಾಂತಿ-ಕ್ಷೋಭೆಗಳಿಗೆ ಕಾರಣವಾಗುವ ಸಂಗತಿಗಳನ್ನೂ ಸೃಷ್ಟಿಸಿರುವೆವು! ಹೀಗೆ ಸೃಷ್ಟಿಯಲ್ಲಿ ಬೇಕಾದುದು ಬೇಡವಾದುದು ಎಲ್ಲವೂ ಇವೆ.

**ವಿಪುಲತೆ :** ಸೃಷ್ಟಿಯಲ್ಲಿ ನಾವು ಕಾಣುವ ಒಂದು ವಿಶೇಷವೇ, ಯಥೇಚ್ಛವಾಗಿರುವುದು, ಸಮೃದ್ಧಿ. ಉದಾಹರಣೆಗೆ, ವರ್ಷಕ್ಕೊಮ್ಮೆ ಹಣ್ಣು ಬಿಡುವ ಮಾವಿನ ಮರದಲ್ಲಿ ಹಣ್ಣು ಬಿಡುವುದಕ್ಕೆ ಮುಂಚೆ, ಮರವು ಹೂವಿನ ಗೊಂಚಲುಗಳಿಂದ ಎಲೆಗಳು ಕಾಣದಂತೆ ಮುಚ್ಚಿಹೋಗಿರುವುದು. ಹೂವುಗಳು ಗಾಳಿಗೆ ಉದುರಿಹೋಗುವುವು. ಹೆಚ್ಚೆಂದರೆ, ನೂರಕ್ಕೆ ಹತ್ತರಷ್ಟು ಹೂಗಳು ಕಾಯಾಗಬಹುದು! ಕಾರಣ, ಸೃಷ್ಟಿಯು ಕೊಡುವುದರಲ್ಲಿ ಕೊಸರಾಡುವುದಿಲ್ಲ. ಕೇಳಿಸಿಕೊಂಡು ಕೊಡುವುದಿಲ್ಲ. ಧಾರಾಳವಾಗಿ ಕೊಡುವುದು. ನಮ್ಮ ದೇಹದಲ್ಲಿ ಉತ್ಪತ್ತಿಯಾಗುವ ಜೀವಾಣುಗಳು ರಕ್ತಕಣಗಳು ಅಂಡಾಣುಗಳು ದೊಡ್ಡ ಸಂಖ್ಯೆಯಲ್ಲಿ ತಯಾರಾಗುತ್ತವೆ. ಮಳೆಯಿಂದ ನೀರು ಧಾರಾಳವಾಗಿ ಬರುತ್ತದೆ. ಜೀವರಾಶಿಗಳು ಅಸಂಖ್ಯವಾಗಿವೆ. ಇದು, ಕೊಡುವುದರಲ್ಲಿ ಧಾರಾಳತನವನ್ನು ಅಭ್ಯಾಸ ಮಾಡುವಂತೆ ಮನುಷ್ಯನಿಗೆ ಸೂಚಿಸುವಂತಿದೆ!

**ವೈವಿಧ್ಯತೆ :** ಸೃಷ್ಟಿಯ ಧಾರಾಳತನ ಪ್ರಮಾಣದಲ್ಲಿ ಮಾತ್ರವಲ್ಲ, ವೈವಿಧ್ಯತೆಯಲ್ಲಿಯೂ ಇದೆ. ಎಲೆ, ಹೂವು, ಹಕ್ಕಿಪಕ್ಷಿಗಳ ರೆಕ್ಕೆಪುಕ್ಕಗಳ ವರ್ಣ-ವಿನ್ಯಾಸ, ಕೋಮಲ ಪುಷ್ಪಗಳ ಸುಗಂಧ, ಫಲಗಳ ಸ್ವಾದ, ಹೂವಿನಂತೆ ಕಾಣುವ ಎಲೆಗಳು, ಪಕ್ಷಿಗಳನ್ನು ಹೋಲುವ ಹೂಗಳು, ಹೂಗಳನ್ನು ಹೋಲುವ ಜಲಚರಗಳು, ವಿವಿಧ ಆಕಾರ ವಿನ್ಯಾಸಗಳುಳ್ಳ ಪ್ರಾಣಿ ಪಕ್ಷಿಸಂಕುಲ ಅನಂತ ವೈವಿಧ್ಯತೆಯಿಂದ ಕೂಡಿ ಅಸಂಖ್ಯವಾಗಿವೆ. 'ನನ್ನ ಸೊಬಗಿನ ವೈವಿಧ್ಯತೆಯನ್ನು ಸವಿಯುತ್ತಾ ಯಾಂತ್ರಿಕ ಬರಡು ಜೀವನದ ನೀರಸತೆಯಿಂದ ಪಾರಾಗಿ' ಎಂದು ಸೃಷ್ಟಿಯು ಮಾನವನನ್ನು ಕೈಬೀಸಿ ಕರೆಯುವಂತಿದೆ.

**ಸ್ನಿಗ್ಧ ಸೌಂದರ್ಯ :** ದಟ್ಟ ಕಾನನದಲ್ಲಿ ಪ್ರೇಕ್ಷಕರಿಲ್ಲದ ಕಡೆ ಅಪರೂಪದ ಸುಂದರ ಸುಗಂಧ ಪುಷ್ಪಗಳು ಅರಳಿ ತಮ್ಮನ್ನು

ತಾವು ಮಹತ್ ಸೃಷ್ಟಿಗೆ ಅರ್ಪಿಸಿಕೊಂಡು ಬಾಡಿಹೋಗುವುವು. ಝರಿ, ಜಲಪಾತ, ತೊರೆ, ಗಿರಿಕಂದರಗಳನ್ನು ಸುತ್ತಿ ಬಳಸುತ್ತಾ ಗಿರಿಶಿಖರಗಳನ್ನು ಪ್ರತಿಬಿಂಬಿಸುತ್ತಾ ತಮ್ಮಲ್ಲಿರುವ ಶ್ರೇಷ್ಠವಾದುದನ್ನು ಯಾವ ಜಾಹಿರಾತೂ ಇಲ್ಲದೆ ಮೌನವಾಗಿ ನಿರಂತರವಾಗಿ ಮಹತ್ತಿಗೆ ಅರ್ಪಿಸಿಕೊಳ್ಳುತ್ತಿವೆ. ಇದನ್ನು ಗಮನಿಸಿದರೆ, 'ನಮ್ಮ ಕರ್ಮದ ಸಾರ್ಥಕತೆ ಅದನ್ನು ಮಾಡುವ ಕೌಶಲದಲ್ಲಿದೆ, ಪ್ರಚಾರ, ಪ್ರಶಂಸೆ, ಪ್ರತಿಫಲದಲ್ಲಿ ಇಲ್ಲ' ಎಂಬ ಕರ್ಮ ಯೋಗದ ಸಾರವನ್ನು ಸೃಷ್ಟಿ ಈ ಮೂಲಕ ಮಾನವನಿಗೆ ಮನದಟ್ಟಾಗುವಂತೆ ಬೋಧಿಸುತ್ತಿರಬಹುದೆಂದು ತೋರುವುದು. ಅಗಾಧ ಪರ್ವತಶ್ರೇಣಿಗಳ ಉನ್ನತ ಶಿಖರಗಳು, ಋಷಿಗಳು ಬಿಟ್ಟುಹೋಗಿರುವ ತತ್ತ್ವಸ್ತೋಮಗಳ ಭವ್ಯತೆಯೆಡೆಗೆ ಮಾನವನಿಗೆ ಆಹ್ವಾನ ನೀಡುತ್ತಿರುವುವೆಂದು ಭಾಸವಾಗುವುದು.

**ಸುವ್ಯವಸ್ಥೆ:** ಅಪಾರ ಸಂಖ್ಯೆ, ವೈವಿಧ್ಯತೆ ಮತ್ತು ಸೌಂದರ್ಯದೊಂದಿಗೆ ಸೃಷ್ಟಿಯಲ್ಲಿ ಕಾಣುವ ಮತ್ತೊಂದು ವಿಶೇಷವೇ ಸಂಯೋಜನೆ, ಸುವ್ಯವಸ್ಥೆ, ಉದ್ದೇಶ ಮತ್ತು ಪರಸ್ಪರ ಸಂಬಂಧ ಇರುವುದು ಕಂಡುಬರುತ್ತದೆ. ಸೃಷ್ಟಿಯಲ್ಲಿ ಯಾವುದೂ ಹೇಗೆಂದರೆ ಹಾಗಿಲ್ಲ, ಸಸ್ಯವೊಂದರಲ್ಲಿ ಆಹಾರ ತಯಾರಿಕೆ, ಆಹಾರ ಸರಬರಾಜು, ಉಸಿರಾಟ, ಆಹಾರ ಸಂಗ್ರಹಣೆ, ಬೀಜಪ್ರಸರಣ ಮುಂತಾದ ವ್ಯವಸ್ಥೆಗಳನ್ನು ಗಮನಿಸಿದರೆ, ಅದರಲ್ಲೇ ಒಂದು ಪಟ್ಟಣ ಇರುವಂತಿದೆ. ಹೂವಿನ ದಳಗಳು ಜೋಡಿಸಲ್ಪಟ್ಟಿವೆ. ಎಲೆಗಳನ್ನು ಕೊಂಬೆಗಳು ವ್ಯವಸ್ಥಿತವಾಗಿ ಹರಡುತ್ತವೆ. ಹಗಲು ಆಹಾರ ತಯಾರಾಗುತ್ತದೆ, ರಾತ್ರಿ ಅದರ ಸರಬರಾಜು ಆಗುತ್ತದೆ. ಕ್ರಿಯೆ ನಿರಂತರವಾಗಿ ನಡೆಯುತ್ತದೆ. ಸಸ್ಯಗಳು ತಮಗೆ ಬೇಡವಾದುದನ್ನು ಕೊಡದೆ, ಮನುಷ್ಯನಿಗೆ ಬೇಕಾದ ಆಮ್ಲಜನಕವನ್ನು ಕೊಡುತ್ತವೆ. ಅವನಿಗೆ ಬೇಡವಾದ ಇಂಗಾಲಾಮ್ಲವನ್ನು ತೆಗೆದುಕೊಳ್ಳುತ್ತವೆ. ಧನ್ಯತೆಗೆ ದಾರಿಯನ್ನು ಮಾನವನಿಗೆ ತೋರಿದಂತಿದೆ. ಪಕ್ಷಿ ಪ್ರಾಣಿಗಳು ಸಸ್ಯಗಳನ್ನು ಆಹಾರ, ಆಸರೆಗಾಗಿ ಅವಲಂಬಿಸಿವೆ. ಇವು ಇತರ ಪ್ರಾಣಿ ಪಕ್ಷಿಗಳಿಗೆ ಆಹಾರವಾಗುತ್ತವೆ. ಹೀಗೆ ನಿಸರ್ಗಮಾತೆ ತನ್ನ ಬೃಹತ್ ಸಂಸಾರಕ್ಕೆ ಮೌನವಾಗಿ ಆಹಾರವನ್ನು ಪೂರೈಸುತ್ತಿರುವಳು. ನಿಸರ್ಗದ ಎಲ್ಲಾ ಕಲಾಪಗಳೂ ಋತುಮಾನಕ್ಕೆ ಹೊಂದಿಕೊಂಡಿವೆ. ಮನುಷ್ಯನಿಗೆ ಬೇಕಾದ ಪೋಷಕಾಂಶಗಳನ್ನು ಆಯಾ ಋತುವಿನ ಆವಶ್ಯಕತೆಗೆ ತಕ್ಕಂತೆ ಕೊಡುತ್ತಿವೆ. ಇಂತಹ ಶಿಸ್ತಿನ ಸಹಜೀವನವನ್ನು ಅನವರತ ದುಡಿಮೆಯಿಂದ ನಡೆಸಲು ಬೇಕಾದ ಪ್ರೇರಣೆಯನ್ನು ಮಾರ್ಮಿಕ ಮೌನದಿಂದ ಸೃಷ್ಟಿಯು ಮಾನವನಿಗೆ ನೀಡುತ್ತಿರುವುದಲ್ಲವೆ?

**ಅನುಕರಣೆ :** ಮಾನವ ಸೃಷ್ಟಿಸಿರುವ ಮತ್ತು ಉಪಯೋಗಿಸುತ್ತಿರುವ ಬಣ್ಣ ಶಬ್ದ ನಾದಗಳು, ಅವನು ಸೃಷ್ಟಿಯಲ್ಲಿ ಕಂಡುದನ್ನು ಅನುಕರಿಸುವ ಪ್ರಯತ್ನವಾಗಿದೆ. ಸಂಗೀತಶಾಸ್ತ್ರದ ಪ್ರಕಾರ, ಸಂಗೀತದಲ್ಲಿ ಉಪಯೋಗಿಸುವ ಸಪ್ತಸ್ವರಗಳಿಗೆ ಪಕ್ಷಿ-ಪ್ರಾಣಿಗಳ ಧ್ವನಿ ಆದರ್ಶವಾಗಿವೆ: ಷಡ್ಜ ನವಿಲಿನ ಕಂಠದಂತಿರಬೇಕು, ರಿಷಭ ಚಾತಕ ಪಕ್ಷಿಯ ಕೂಗಿನಂತಿರಬೇಕು, ಗಾಂಧಾರ ಆಡಿನ ಧ್ವನಿಯಂತಿರಬೇಕು, ಮಧ್ಯಮ ಕ್ರೌಂಚ ಪಕ್ಷಿಯ ರವದಂತಿರಬೇಕು, ಪಂಚಮ ಕೋಕಿಲವಾಣಿಯಂತೆ, ಧೈವತ ಕಪ್ಪೆಯ ಗುಟುರಿನಂತೆ, ಮತ್ತು ನಿಷಾದ ಆನೆಯ ಗರ್ಜನೆಯಂತಿರಬೇಕು. ಇವಲ್ಲದೆ, ಕಾಕಲಿ ನಿಷಾದ, ಕೋಮಲ ಗಾಂಧಾರ, ಮಧ್ಯಮ, ಮುಂತಾದ ಸ್ವರಗಳೂ ರಾಗ ಗಳೂ ಮಾನವನು ಹೇಗೆ ಸೃಷ್ಟಿಯನ್ನು ಅನುಕರಿಸುತ್ತಿರುವನು ಎಂಬುದನ್ನು ತಿಳಿಸುವುವು. ಕೊಳಲು ತಯಾರಾಗುವುದು ಬಿದಿರಿನಿಂದ. ಹಾಗೆಯೇ ಮೃದಂಗ ಮರದಿಂದ. ಚಿತ್ರಗಳು ನಮ್ಮ ಮನಸ್ಸನ್ನು ರಂಜಿಸುತ್ತವೆ. ಇವನ್ನು ಬಿಡಿಸುವ ಕುಂಚಕ್ಕೆ ಬೇಕಾದ ಬಣ್ಣಗಳನ್ನು ತಯಾರಿಸಲು ಸ್ಫೂರ್ತಿ ಅರುಣರಾಗ, ಸಂಜೆಗೆಂಪು, ನೀಲಾಕಾಶ, ಸಸ್ಯಗಳ ಹರಿದ್ವರ್ಣಗಳು. ಹೀಗೆ ಮಾನವನ ನಾಗರಿಕತೆ ಸೃಷ್ಟಿಗೆ ಹೊಂದಿಕೊಂಡೇ ಬೆಳೆಯುತ್ತಿದೆ.

**ಪರಿಸರ :** ಪರಿಸರವಾದಿಗಳು, 'ಸೃಷ್ಟಿಯಿಂದ ಮಾನವ ಯಾವಾಗಲೂ ತೆಗೆದುಕೊಳ್ಳುತ್ತಿರುವನು, ಅದಕ್ಕೆ ಕೊಡುವ ಕೆಲಸವನ್ನೂ ನಾವು ಮಾಡಬೇಕು. ಸೃಷ್ಟಿ ತನಗಾಗಿ ಸೃಷ್ಟಿಯಾಗಿದೆ ಎಂದು ಮಾನವನು ಊಹಿಸಿಕೊಂಡಿರುವನು. ಇದೆಲ್ಲಾ ತಪ್ಪು' ಎಂದು ವಾದಿಸುವರು. ಮತ್ತೊಂದೆಡೆ ಪ್ರಕೃತಿವಾದಿಗಳು, ನಾವು ಹೆಚ್ಚು ಹೆಚ್ಚಾಗಿ ಪ್ರಕೃತಿಯ ವಸ್ತುಗಳನ್ನು ಉಪಯೋಗಿಸಬೇಕು. ಮನುಷ್ಯನು ಕೃತಕವಾಗಿ ತಯಾರಿಸಿರುವುದು ಹಾನಿಕರ ಎನ್ನುವರು. ಪ್ರಕೃತಿಯನ್ನು ಆರಾಧಿಸಿದರೆ ಸಾಲದು, ರಕ್ಷಿಸಬೇಕು ಎಂಬುದು ಪ್ರಪಂಚದ ಎಲ್ಲೆಡೆ ಅನುರಣಿತವಾಗುತ್ತಿದೆ. ಅನಾಮಧೇಯ ಕವಿ ರಚಿಸಿದ 'ಪ್ರೇಯರ್ ಆಫ್ ದ ವುಡ್ಸ್' ಎಂಬ ಕವಿತೆಯ ಮೂಲಕ ಅರಣ್ಯದ ಸಂರಕ್ಷಣೆಯ ಸಂದೇಶವು ಪಶ್ಚಿಮದ ಅನೇಕ ಅರಣ್ಯಧಾಮಗಳಲ್ಲಿ ಮರದ ಫಲಕಗಳಲ್ಲಿ ಪ್ರಕಾಶಿತವಾಗಿ, ಬಳಿಕ ಜಗತ್ತಿನೆಲ್ಲೆಡೆ ಹರಡಿತು. ಇದರ ಇಂಗ್ಲಿಷ್ ಅನುವಾದ ಭಾರತೀಯ ಶಾಲಾ ವಿದ್ಯಾರ್ಥಿಗಳ ಪಠ್ಯಪುಸ್ತಕಗಳಲ್ಲಿ ಸೇರಿಸಲ್ಪಟ್ಟಿತು. ಶ್ರೀ ಇಂಚಲ ಎಂಬವರು ಅದನ್ನು ಕನ್ನಡಕ್ಕೆ ಹೀಗೆ ಅನುವಾದಿಸಿದ್ದಾರೆ:

### ಬನದ ಬಯಕೆ

**ಕೊರೆವ ಚಳಿಗಾಲದ ರಾತ್ರಿಗಳಲ್ಲಿ ನಿನ್ನ ಮನೆ ಬಿಸಿಗೈವ ಕಾವು ನಾನು,**
**ಉರಿವ ಬಿಸಿಲ ಬೇಸಗೆಯ ದಿನಗಳಲಿ ನಿನ್ನ ರಕ್ಷಿಪ ತಂಪು ನೆಳಲು ನಾನು.**
**ನಿನ್ನ ಮನೆ ಚಪ್ಪರದ ರಚನೆ ನಾನು, ನಿನ್ನ ಆಸನದ ಮೇಲ ಮೈಯು ನಾನು,**
**ನೀ ನಿತ್ಯ ಪವಡಿಸುವ ಶಯ್ಯೆ ನಾನು, ನಿನ್ನ ಕೈ ನಿರ್ಮಿಸಿದ ನೌಕೆ ನಾನು!**
**ನಿನ್ನ ಕೈ ಗುದ್ದಲಿಯ ಹಿಡಿಕೆ ನಾನು, ನಿನ್ನ ಗುಡಿಸಿಲಿನ ಬಾಗಿಲು ನಾನು;**
**ನಿನ್ನ ತೊಟ್ಟಿಲ ಮೂಲ ಕಟ್ಟಿಗೆ ನಾನು, ತವ ಶವದ ಪೆಟ್ಟಿಗೆಯ ಹಲಗೆ ನಾನು!**
**ನಿನ್ನದೆಯ ಮಾರ್ದವದ ಪರಮಾನ್ನ ನಾನು, ನಿನ್ನ ಸೌಂದರ್ಯದ ಕುಸುಮ ನಾನು;**
**ಕೇಳೆನ್ನ ಮೊರೆಯನ್ನು ಮನುಜ ನೀನು, ನಾಶಗೊಳಿಸಲು ಬೇಡ ಅಡವಿಯನು.**

ಮನುಷ್ಯನ ದುರಾಸೆಯಿಂದ ಮರದ ಹಲಗೆ ಕಾಣದಾಯಿತು. ಮರದಿಂದ ನಿರ್ಮಿತವಾದ ಮನೆ ಸಂಗ್ರಹಾಲಯದ ವಸ್ತುವಾಯಿತು. ಕಟ್ಟಡಗಳಿಗೆ ಬೇಕಾದ ಮರಳು ಮಾಯವಾಯಿತು. ಕಲ್ಲಿನ ಬೆಟ್ಟಗಳು ಕರಗಿಹೋದವು. ಕೊಂಬಿಗಾಗಿ ಘೇಂಡಾಮೃಗಗಳ ಹತ್ಯೆಯಾಯಿತು. ಚರ್ಮಕ್ಕಾಗಿ ಹುಲಿಗಳು ಬಲಿಯಾದುವು. ದಂತಕ್ಕಾಗಿ ಆನೆಗಳು ಅಸುನೀಗಿದುವು. ವಿನೋದಕ್ಕಾಗಿ ಅಪರೂಪದ ಪಕ್ಷಿಗಳು ಬೇಟೆಯಾಡಲ್ಪಟ್ಟವು.

**ವನ್ಯಸಂರಕ್ಷಣೆ :** ಭಾರತ ರಾಜಕೀಯ ಸ್ವಾತಂತ್ರ್ಯವನ್ನು ಇತ್ತೀಚೆಗೆ ಪಡೆದಿದ್ದರೂ ವನ್ಯಸಂರಕ್ಷಣೆ, ಪರಿಸರ ರಕ್ಷಣೆ, ವಾಯುಮಾಲಿನ್ಯ ಮುಂತಾದವುಗಳ ಬಗ್ಗೆ ಶಾಸನಗಳನ್ನು ತಂದು, ಜಾರಿಗೊಳಿಸಿ, ಸಾರ್ವಜನಿಕರ ತಿಳಿವಳಿಕೆಗಾಗಿ ಪ್ರಯತ್ನ ಮಾಡಿದುದಲ್ಲದೆ ಸರ್ಕಾರ, ಎಕಾಲಜಿ, ಎನ್‌ವೈರನ್‌ಮೆಂಟ್, ಫಾರೆಸ್ಟ್ರಿ, ಮಿಟಿಯೊರಾಲಜಿ ಮುಂತಾದವುಗಳ ಆಳವಾದ ಆಧ್ಯಯನವನ್ನು ವಿಶ್ವವಿದ್ಯಾನಿಲಯಗಳಲ್ಲಿ ಪ್ರಾರಂಭಿಸಿ, ಇವುಗಳ ಪ್ರಾರಂಭಿಕ ಪಾಠಗಳನ್ನು ಶಾಲೆಯ ಪಾಠಗಳಲ್ಲಿ ಸೇರಿಸಿದೆ. ಆಧುನಿಕ ಕಂಪ್ಯೂಟರ್ ತಂತ್ರಜ್ಞಾನ ಇದಕ್ಕೆ ಬಹಳ ಸಹಕಾರಿಯಾಯಿತು. ಕಾಗದರಹಿತ ಕಛೇರಿಗಳು ಅಸ್ತಿತ್ವಕ್ಕೆ ಬಂದುದರಿಂದ ಕಾಗದ ತಯಾರಿಕೆಗೆ ಬೇಕಾದ ಮರಗಳು ಅಪಾರ ಪ್ರಮಾಣದಲ್ಲಿ ಉಳಿದಂತಾಯಿತು. ನೈಸರ್ಗಿಕ ಅನಿಲ, ಇಂಧನ ಮುಂತಾದವು ಪರಿಸರ ಮಾಲಿನ್ಯವನ್ನು ತಗ್ಗಿಸಲು ಸಹಕಾರಿಯಾಗಿವೆ.

**ಪ್ರಾತಃಸ್ಮರಣೀಯರು :** ಭಾರತದ ವನ್ಯಸಂರಕ್ಷಣೆಯ ವಿಷಯ ಬಂದಾಗ ಮೂವರು ಪ್ರಾತಃಸ್ಮರಣೀಯರು ನೆನಪಿಗೆ ಬರುವರು. ಮೊದಲನೆಯವರೇ ಜಿಮ್ ಕಾರ್ಬೆಟ್ (೧೮೭೫-೧೯೫೫). ಇವರ ಪುಸ್ತಕಗಳನ್ನು ಓದದವರಿಲ್ಲ. ನರಭಕ್ಷಕ ಹುಲಿ, ಚಿರತೆಗಳನ್ನು ಬೇಟೆಯಾಡಿ ಸಂಹರಿಸಿದ ರೋಮಾಂಚಕ ಸನ್ನಿವೇಶಗಳನ್ನು ಅವರ ಪುಸ್ತಕಗಳಲ್ಲಿ ವಿವರಿಸಿದ್ದಾರೆ. ಇವರು ಬ್ರಿಟನ್ನಿನವರು. ತಂದೆ ಬ್ರಿಟಿಷರ ಸೈನ್ಯದಲ್ಲಿ ಭಾರತದಲ್ಲಿ ಕೆಲಸ ಮಾಡುತ್ತಿದ್ದರು. ಇವರ ಜನನ ಭಾರತದಲ್ಲಿ. ಇವರೂ ಸೈನ್ಯದಲ್ಲಿ ಇದ್ದರು. ಇವರು ಇದ್ದುದು ಹಿಮಾಲಯದ ತಡಿಯಲ್ಲಿ ಇದ್ದ ಕುಮಾಂವ್ ಪ್ರದೇಶ, ಈಗ ಉತ್ತರಖಂಡ ರಾಜ್ಯಕ್ಕೆ ಸೇರಿದೆ. ಆ ಪ್ರದೇಶದಲ್ಲಿ ನರಭಕ್ಷಕ ಹುಲಿ ಮತ್ತು ಚಿರತೆಗಳಿಗೆ ಸಾವಿರಾರು ಜನ ಆಹುತಿಯಾದರು. ತಮ್ಮನ್ನು ಕಾಪಾಡುವಂತೆ ಜನ ಇವರನ್ನು ಆಗಾಗ್ಗೆ ಕೇಳಿಕೊಳ್ಳುತ್ತಿದ್ದರು. ಆಗ ಇವರು ಆ ನರಭಕ್ಷಕ ಹುಲಿ ಚಿರತೆಗಳನ್ನು ಕಾಡಿನಲ್ಲಿ ಪತ್ತೆ ಹಚ್ಚಿ ಬಂದೂಕಿನಿಂದ ಕೊಂದುಹಾಕಿದರು. ನಂತರ ಆ ಮೃಗಗಳ ಶರೀರವನ್ನು ಪರೀಕ್ಷಿಸಿ ಅವು ನರಭಕ್ಷಕರಾಗುವುದಕ್ಕೆ ಕಾರಣ ಕಂಡುಹಿಡಿಯುತ್ತಿದ್ದರು. ಇವರ ಪುಸ್ತಕಗಳಿಂದ ಸಾಮಾನ್ಯರು ಹಾಗೂ ವನ್ಯಜೀವನಾಸಕ್ತರಿಗೆ ಕಾಡಿನ ಬಗ್ಗೆ ಶಿಕ್ಷಣ ಮತ್ತು ಮನರಂಜನೆ ದೊರೆಯಿತು. ಇವರು ಮುಖ್ಯವಾಗಿ ವನ್ಯಸಂರಕ್ಷಣೆಯಲ್ಲಿ ಆಸಕ್ತರಾಗಿದ್ದರು. ಕಾಡಿನ ಸುತ್ತಮುತ್ತ ಇದ್ದ ಜನರ ಜೀವರಕ್ಷಣೆಗಾಗಿ ಕೆಲವು ಪ್ರಾಣಿಗಳನ್ನು ಕೊಂದರಷ್ಟೆ. ಷಿಕಾರಿ ಇವರ ಹವ್ಯಾಸವಾಗಿರಲಿಲ್ಲ. ಧೈರ್ಯವಾಗಿ ಒಬ್ಬರೇ ಬಂದೂಕು ಮತ್ತು ಕ್ಯಾಮೆರಾದೊಂದಿಗೆ ಕಾಡಿನಲ್ಲಿ ವಿಹರಿಸುತ್ತಿದ್ದರು. ಇವರ ಶ್ರಮದಿಂದಾಗಿ ವಿಸ್ತಾರವಾದ ರಾಷ್ಟ್ರೀಯ ವನ್ಯಸಂರಕ್ಷಣಾ ಉದ್ಯಾನ ಉತ್ತರಖಂಡದಲ್ಲಿ ಸ್ಥಾಪಿತವಾಯಿತು. ಇವರ ಗೌರವಾರ್ಥ ಭಾರತ ಸರ್ಕಾರ ಇವರ ಹೆಸರನ್ನು ಆ ಉದ್ಯಾನಕ್ಕೆ ಇಟ್ಟರು. ಭಾರತದ ಬಡ ಜನರಿಗೆ ಇವರ ಹೃದಯ ಮರುಗುತ್ತಿತ್ತು. ಅವರಿಗೆ ಇವರ ಪುಸ್ತಕಗಳನ್ನು ಅರ್ಪಿಸಿರುವರು.

ಎರಡನೆಯವರೇ ಡಾ. ಸಲೀಮ್ ಅಲಿ (೧೮೯೬-೧೯೮೭). ಇವರು ವಿಶ್ವವಿಖ್ಯಾತರು. ತಮ್ಮ ಜೀವಿತವನ್ನು ಪಕ್ಷಿಗಳೊಂದಿಗೆ ಕಳೆದರೆಂದು ಹೇಳಬಹುದು. ಇವರಿಗೆ ಭಾರತದ 'ಪಕ್ಷಿ-ಮಾನವ' (ಬರ್ಡ್ ಮ್ಯಾನ್) ಎಂಬ ಅಡ್ಡಹೆಸರಿತ್ತು. ಭಾರತದ ಎಲ್ಲಾ ಪ್ರದೇಶಗಳ, ಎಲ್ಲಾ ಬಗೆಯ ಹಕ್ಕಿಪಕ್ಷಿಗಳ ಬಗ್ಗೆ ಅಧ್ಯಯನ ಮಾಡಿ ಸಂಪುಟಗಳನ್ನು ಬರೆದು ಪ್ರಕಟಿಸಿದರು. ಅವು ಸಂಶೋಧಕರಿಗೆ ಮತ್ತು ಸಾಮಾನ್ಯರಿಗೆ ವಿಶ್ವಕೋಶದಂತೆಯೂ ಮೂಲಗ್ರಂಥಗಳಂತೆಯೂ ಅಂತರರಾಷ್ಟ್ರೀಯ ಮನ್ನಣೆ ಪಡೆದಿವೆ. ಅಪಾರ ಸಂಖ್ಯೆಯ ಸಂಶೋಧನ ಲೇಖನಗಳನ್ನು ವೈಜ್ಞಾನಿಕ ನಿಯತಕಾಲಿಕೆಗಳಿಗೆ ಬರೆದಿದ್ದಾರೆ. ಇವರ ಶ್ರಮಪೂರಿತ ಸಂಶೋಧನೆ ಮತ್ತು ಜ್ಞಾನನಿಷ್ಠೆಯನ್ನು ಗೌರವಿಸಿ ಭಾರತ ಸರ್ಕಾರ ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ನೀಡಿತು.

ಮೂರನೆಯವರೇ ಕೆನೆತ್ ಆಂಡರ್‌ಸನ್ (೧೯೧೦-೧೯೭೪). ಇವರೂ ಬ್ರಿಟನ್ನಿನವರೇ. ಆದರೆ ಇವರ ಜನನ, ಶಿಕ್ಷಣ, ವಾಸ ಎಲ್ಲಾ ಬೆಂಗಳೂರಿನಲ್ಲಿ. ಬಾಲ್ಯದಿಂದಲೇ ಪ್ರಾಣಿಪ್ರಿಯರು. ಸೈಂಟ್ ಜೋಸೆಫ್ ಶಾಲೆಯಲ್ಲಿ ಓದುತ್ತಿದ್ದಾಗ ಜೇಬಿನಲ್ಲಿ ಹಾವಿನ ಮರಿ ಇತ್ಯಾದಿ ಪ್ರಾಣಿಗಳನ್ನು ಇಟ್ಟುಕೊಂಡಿರುತ್ತಿದ್ದರಂತೆ. ಇವರು ಹಳೆಯ ಕಾಲದ ಕಾರು, ಬಂದೂಕು ಫ್ಲಾಸ್ಕ್‌ನಲ್ಲಿ ಬಿಸಿಯಾದ ಚಹಾ, ಬಿಸ್ಕೆಟ್ ಇಟ್ಟುಕೊಂಡು ಕಾಡಿಗೆ ಹೋಗುತ್ತಿದ್ದರು. ಯಾವಾಗಲಾದರೊಮ್ಮೆ ನಗರಕ್ಕೆ ಹಿಂದಿರುಗುತ್ತಿದ್ದರು. ಇವರ ಆಯಸ್ಸಿನ ಬಹುಭಾಗ ಕಾಡಿನಲ್ಲೇ ಕಳೆಯಿತೆಂದು ಹೇಳಬಹುದು. ಇವರ ವಿಶೇಷಗಳೆಂದರೆ, ಇವರ ಕಾರ್ಯ ವ್ಯಾಪ್ತಿ ದಕ್ಷಿಣ ಭಾರತದ ಕಾಡುಗಳು — ಕರ್ನಾಟಕ, ಕೇರಳ, ತಮಿಳುನಾಡು ಮೂರೂ ರಾಜ್ಯಗಳ ಕಾಡುಗಳೂ ಸೇರಿದ ವಿಶಾಲ ಅರಣ್ಯ ಮತ್ತು ಆಂಧ್ರಪ್ರದೇಶದ ಕಾಡು. ರಾತ್ರಿ ವೇಳೆ ನಿರಾಯುಧರಾಗಿ ಒಂದು ಟಾರ್ಚ್ ಇಟ್ಟುಕೊಂಡು ಅರಣ್ಯದಲ್ಲಿ ಸಂಚರಿಸುತ್ತಾ ಅಲ್ಲಿನ ರಾತ್ರಿಯ ಪ್ರಾಣಿ-ಪಕ್ಷಿ ಜೀವನವನ್ನು ಗಮನಿಸುವುದು ಇವರ ಇಷ್ಟವಾದ ಹವ್ಯಾಸವಾಗಿತ್ತು. ಹಗಲು ತಮ್ಮ ಜೀವರಕ್ಷಣೆಗೆ ಬಂದೂಕ ಇಟ್ಟುಕೊಂಡು, ಕೆಲ ವೇಳೆ ಅದೂ ಇಲ್ಲದೆ, ಕಾಡಿನ ಜೀವನವನ್ನು ಆಸಕ್ತಿಯಿಂದ ಗಮನಿಸುತ್ತಾ ಪರ್ಯಟನೆ ಮಾಡುತ್ತಿದ್ದರು. ಆಗಾಗ, ಮನುಷ್ಯರನ್ನು ತಿಂದು ಹಾಕುತ್ತಿದ್ದ ಹುಲಿ, ಚಿರತೆಗಳ ಹಾವಳಿಯಿಂದ ತಮ್ಮನ್ನು ಪಾರು ಮಾಡಬೇಕೆಂಬ ಕಳಕಳಿಯ ಪತ್ರಗಳು ಇವರ ಮನೆಗೆ ಅಂಚೆಯ

ಮೂಲಕ ಬಂದು ಬೀಳುತ್ತಿದ್ದುವು. ಇವರ ವನವಿಹಾರ ಮುಗಿಸಿ ಬೆಂಗಳೂರಿಗೆ ಹಿಂತಿರುಗಿದಾಗ ಈ ಪತ್ರಗಳನ್ನು ಓದುತ್ತಿದ್ದಂತೆ, ಬಡಜನರ ಪ್ರಾಣಾಪಾಯಕ್ಕೆ ಮನಕರಗಿ, ಇದ್ದ ಹಾಗೆಯೇ ಮತ್ತೆ ಆ ಕಾಡಿನ ಗ್ರಾಮಗಳಿಗೆ ತೆರಳಿ ವಿವರಗಳನ್ನು ತಿಳಿದುಕೊಂಡು ಕಾಡನ್ನು ಪ್ರವೇಶಿಸಿ ಆ ದುಷ್ಟ ಮೃಗಗಳ ಸಂಹಾರಕಾರ್ಯ ಮಾಡುತ್ತಿದ್ದರು. ಇವರ ಮಗನಿಗೂ ಷಿಕಾರಿಯಲ್ಲಿ ಆಸಕ್ತಿಯಿತ್ತು. ಕೆಲವು ವೇಳೆ ತಂದೆಯೊಂದಿಗೆ ಕಾಡಿಗೆ ಹೋಗಿ ಅವರ ಪ್ರಯತ್ನ ದಲ್ಲಿ ನೆರವಾಗುತ್ತಿದ್ದನು.

ಇವರಲ್ಲಿದ್ದ ಮತ್ತೊಂದು ಅಪೂರ್ವ ಪ್ರತಿಭೆ ಮತ್ತು ಇವರು ಮಾಡಿರುವ ಸೇವೆ ಎಂದರೆ ಇವರ ಪುಸ್ತಕಗಳು. ಅವನ್ನು ಓದುತ್ತಿದ್ದರೆ ನಾವೇ ಕಾಡಿನಲ್ಲಿ ಅವರೊಡನೆ ಹೋಗುತ್ತಿರುವ, ನೋಡುತ್ತಿರುವ ಅನುಭವವಾಗುತ್ತದೆ. ಎಲ್ಲಾ ವಿಷಯಗಳೂ ನಮಗೆ ಆಗಲೇ ಗೊತ್ತಿದೆ ಎನಿಸುತ್ತದೆ. ಇವರ ಪುಸ್ತಕಗಳು ಬ್ರಿಟನ್ನಿನಿಂದ ಪ್ರಕಾಶಿಸಲ್ಪಟ್ಟವು. ಇವರ ಪುಸ್ತಕಗಳನ್ನು ಓದಿದ್ದ ಪ್ರಕಾಶಕರು ಒಮ್ಮೆ ಇಂಗ್ಲೆಂಡಿನಿಂದ ಬಂದು ಇವರೊಡನೆ ಕಾಡಿಗೆ ಹೋದರು. ದೃಶ್ಯಗಳನ್ನು ನೋಡುವಾಗ ಅವೆಲ್ಲ ಆಗಲೆ ಅವರಿಗೆ ಪರಿಚಿತವಾದಂತೆ ಇತ್ತು ಎಂದು ಹೇಳಿದರು. ಸತ್ಯಸಂಗತಿಗಳನ್ನು ಕಾದಂಬರಿಯಂತೆ ಬರೆಯುವ ಪ್ರತಿಭೆ ಇವರಿಗೆ ಕರಗತವಾಗಿತ್ತು. ಇವರ ಅರಣ್ಯದ ಅನುಭವ ಮೇಲೋ, ಬರವಣಿಗೆಯ ಕೌಶಲ ಮೇಲೋ ಹೇಳಲಾಗದು. ಇವರ ಪುಸ್ತಕಗಳು ಹಲವಾರು ದೇಶಗಳಲ್ಲಿ ಪ್ರಕಟಿತವಾಗಿ ಅನೇಕ ಮುದ್ರಣಗಳನ್ನು ಕಂಡಿವೆ. ಸರಳ ಜೀವಿಯಾಗಿದ್ದ ಇವರು ಕಾಡಿನ ಜನರನ್ನು ಕಾಡಿನಷ್ಟೇ ಪ್ರೀತಿಸುತ್ತಿದ್ದರು. ಅವರ ಗಿಡಮೂಲಿಕೆಗಳ ಔಷಧಿಯನ್ನು ತೆಗೆದುಕೊಳ್ಳುತ್ತಿದ್ದರು. ಕ್ಯಾನ್ಸರಿಗೆ ತುತ್ತಾಗಿ ೬೪ನೆ ವಯಸ್ಸಿನಲ್ಲಿಯೇ ತೀರಿಕೊಂಡರು.

**ಅಂತರಿಕ್ಷ :** ಸೃಷ್ಟಿಯ ಬಗ್ಗೆ ಮಾನವನ ಕುತೂಹಲ ಭೂಮಿಗೆ ಸೀಮಿತವಾಗಿಲ್ಲ. ಇತರ ಗ್ರಹಗಳೂ ಇವನ ಗಮನ ಸೆಳೆದಿವೆ. ಚಂದ್ರಗ್ರಹಕ್ಕೆ ಹೋಗಿಬರುವುದು ಅಭ್ಯಾಸವಾಗಿದೆ. ಮಂಗಳ ಗ್ರಹದಲ್ಲಿ ನೀರು ಇರುವಂತೆ ತೋರುತ್ತಿದೆ ಎಂದು ಆಗಲೆ ಕಂಡುಹಿಡಿದಿರುವನು. ಇತರ ಗ್ರಹಗಳಲ್ಲಿ ಮಾನವನ ವಾಸ ಪ್ರಾರಂಭವಾಗಬಹುದು. ವಿಳಾಸ ಬರೆಯುವಾಗ ನಾವು ಗ್ರಹವನ್ನೂ ನಮೂದಿಸಬೇಕಾಗಬಹುದು! ಬಾಹ್ಯಾಕಾಶ ಸಂಶೋಧನೆಯಲ್ಲಿ ಭಾರತ ಮುಂಚೂಣಿಯಲ್ಲಿದೆ. ಈ ಕ್ಷೇತ್ರದಲ್ಲಿ ಭಾರತದ ಗಣಿತ ಶಾಸ್ತ್ರಜ್ಞರು ಭೌತಶಾಸ್ತ್ರಜ್ಞರು ವಿಶ್ವಪ್ರಸಿದ್ಧರಾಗಿದ್ದಾರೆ. ಇದರಿಂದಾಗಿ ನಾವು ಮಳೆ ಪ್ರವಾಹ ಸೈಕ್ಲೋನ್ ಸುನಾಮಿ ಮುಂತಾದುವನ್ನು ನಿಖರವಾಗಿ ತಿಳಿಯುವುದಕ್ಕೆ ಸಾಧ್ಯವಾಗಿದೆ. ಈ ಶಕ್ತಿ ಕೃಷಿಗೆ ಸಹಾಯಕವಾಗಿದೆ.

**ಮಾನವ ಮತ್ತು ಸೃಷ್ಟಿ :** ಮಾನವ ಸೃಷ್ಟಿಯ ಬಗ್ಗೆ ತಿಳಿದಷ್ಟೂ ಅವನ ಕುತೂಹಲ ಮತ್ತು ಸಾಹಸ ಹೆಚ್ಚುತ್ತಾ ಹೋಗುತ್ತಿದೆ. ಸೃಷ್ಟಿ ಬಡ ಪೆಟ್ಟಿಗೆ ತನ್ನ ರಹಸ್ಯವನ್ನು ಮಾನವನಿಗೆ ಬಿಟ್ಟುಕೊಡುವುದಿಲ್ಲ. ಯಾರು ಧೀರರೊ ಸಾಹಸಿಗಳೊ ಪ್ರಯತ್ನಶೀಲರೊ ಅಂತಹವರು ತಮ್ಮ ಬುದ್ಧಿಶಕ್ತಿ, ಮನಶ್ಶಕ್ತಿಯನ್ನೆಲ್ಲಾ ತೊಡಗಿಸಿ ಸೃಷ್ಟಿಯ ನಿಯಮಗಳನ್ನು ದೃಢ ಸಂಕಲ್ಪದಿಂದ ಶ್ರಮಪಟ್ಟು ಹೊರಗೆಡಹಿರುವರು. ಇದರಿಂದ ಮಾನವನ ಬಾಹ್ಯಜ್ಞಾನ ವೃದ್ಧಿಯಾಗಿ ನಿತ್ಯ ಜೀವನಕ್ಕೆ ಸಹಾಯವಾಗಿದೆ. ಮಾನವನ ಆವಿಷ್ಕಾರಗಳು ಬಂದಿರುವುದು ಸೃಷ್ಟಿಯನ್ನು ಅನುಸರಿಸಿರುವುದರಿಂದಲ್ಲ, ಅದಕ್ಕೆ ವಿರೋಧವಾಗಿ ಹೋಗಿರುವುದರಿಂದ ಎಂದು ಸ್ವಾಮಿ ವಿವೇಕಾನಂದರು ಅನೇಕ ಬಾರಿ ತಿಳಿಸಿರುವರು.

**ಮಾನವ: ಸೃಷ್ಟಿಯ ಭಾಗ :** ಮಾನವ ಸೃಷ್ಟಿಯ ಬಗ್ಗೆ ಅನ್ವೇಷಣೆ ಆವಿಷ್ಕಾರಗಳನ್ನು ಮಾಡಿ ಅದರ ಹಿಂದಿರುವ ನಿಯಮಗಳನ್ನು ಪತ್ತೆಹಚ್ಚುವುದರಲ್ಲಿ ಯಶಸ್ಸನ್ನು ಕಂಡು ಪ್ರಗತಿಯನ್ನು ಸಾಧಿಸಿದ್ದಾನೆ. ಆದರೆ ಮಾನವನೂ ಕೂಡ ಸೃಷ್ಟಿಯ ಒಂದು ಅಂಶವೇ ಎಂಬುದನ್ನು ಗಮನಿಸಬೇಕಾಗಿದೆ. ಮಾನವ ಸೃಷ್ಟಿಯನ್ನು ವಿಶ್ಲೇಷಿಸಿದ್ದಾನೆ. ಆದರೆ ಸೃಷ್ಟಿ ಮಾನವನನ್ನು ವಿಶ್ಲೇಷಿಸಲಾರದು. ಮಾನವ ತನ್ನನ್ನು ತಾನೆ ವಿಶ್ಲೇಷಿಸಿಕೊಳ್ಳಬೇಕಾಗಿದೆ. ಗಿಡಮರಗಳು, ಪ್ರಾಣಿಪಕ್ಷಿಗಳು, ನದಿ ಬೆಟ್ಟ ಮುಂತಾದ ಜಡ ವಸ್ತುಗಳು — ಇವೆಲ್ಲವೂ ಅವನಿಂದ ಹೊರಗಿವೆ. ಇವಕ್ಕೆ ಸಂಬಂಧಪಟ್ಟ ಜ್ಞಾನ, ಬಾಹ್ಯಜ್ಞಾನ. ಅವನಿಗೇ ಸಂಬಂಧಪಟ್ಟ ಜ್ಞಾನ ಆಂತರಿಕ ಜ್ಞಾನ. ಸೃಷ್ಟಿ ಯಾವ ರೀತಿ ಆಗಿದೆ, ಅದರ ಸ್ವಭಾವ ವೇನು ಎಂಬುದರ ಬಗ್ಗೆ ಕಾರ್ಯ-ಕಾರಣ ಸಂಬಂಧವನ್ನು ಕಂಡುಹಿಡಿಯುವಲ್ಲಿ ಸಫಲನಾಗಿರುವನು. ಸೃಷ್ಟಿ ಏತಕ್ಕೆ ಆಯಿತು, ಯಾರು ಅದನ್ನು ಸೃಷ್ಟಿಸಿದರು, ಅದರ ಹಿಂದೆ ಇರುವ ನಿಯಮಗಳನ್ನು ಯಾರು ಜಾರಿಗೆ ತಂದರು ಎಂಬುದನ್ನು ಅವನ ಬಾಹ್ಯಜ್ಞಾನ ಅಥವಾ ವಸ್ತುವಿಜ್ಞಾನ, ಜೀವವಿಜ್ಞಾನ ವಿವರಿಸಲಾಗಿಲ್ಲ.

**ಪ್ರಾಣಿ ಮತ್ತು ಮನುಷ್ಯ:** 'ಪ್ರಕೃತಿ' ಎಂಬ ಪದ 'ಸೃಷ್ಟಿ' ಎಂಬ ಪದಕ್ಕಿಂತ ವಿಶಾಲವಾದ ಅರ್ಥವುಳ್ಳದ್ದಾಗಿದೆ. ಪ್ರಕೃತಿ ಎಂಬುದು 'ಸೃಷ್ಟಿ', ಮಾನವ ಇವನ್ನು ಒಳಗೊಳ್ಳುವುದಷ್ಟೇ ಅಲ್ಲದೆ, ಅವುಗಳ ಸೃಷ್ಟಿಗೆ ಬೇಕಾದ ಮೂಲವಸ್ತುಗಳೂ ಅದರಲ್ಲಿ ಸೇರಿವೆ. ಮಾನವನ ವಿಶೇಷವೇ, ಅವನನ್ನು ಅವನೇ ಅರ್ಥ ಮಾಡಿಕೊಳ್ಳಬಲ್ಲ, ವಿಶ್ಲೇಷಿಸಿಕೊಳ್ಳಬಲ್ಲ ; ಮಾನವ ಹೇಗೆ ಮತ್ತು ಏತಕ್ಕೆ ಸೃಷ್ಟಿಯಾದ ಮತ್ತು ಅವನ ಜೀವನದ ಗುರಿ ಏನು ಎಂಬುದನ್ನು ಅವನು ತಿಳಿಯಬಲ್ಲ. ಇದು ಮಾನವನಿಗೂ ಪ್ರಾಣಿಗಳಿಗೂ ಇರುವ ವ್ಯತ್ಯಾಸ. ಕಾಡಿನ ಅತ್ಯಂತ ಬಲಿಷ್ಠ ಪ್ರಾಣಿಗಳೆಂದರೆ, ಹುಲಿ ಮತ್ತು ಆನೆ. ಅದರ ಕಾಲಿಗೆ ಒಂದು ಮುಳ್ಳು ಹೊಕ್ಕರೆ, ಅವು ಅದನ್ನು ಹೊರತೆಗೆಯಲಾರವು. ಮುಳ್ಳು ಕಾಲಿನಲ್ಲಿಯೇ ಉಳಿದು ವ್ರಣವಾಗಿ ಆ ಕಾಲನ್ನು ಸರಿಯಾಗಿ ಊರಲಾರದೆ, ಮೂರು ಕಾಲುಗಳ ಮೇಲೆ ಕುಂಟಬೇಕಾಗುವುದು. ಇದರಿಂದ ಹುಲಿ ರಭಸವಾಗಿ ಓಡಲಾಗದೆ ತನ್ನ ಆಹಾರಕ್ಕಾಗಿ ಇತರ ಪ್ರಾಣಿಗಳನ್ನು ಬೇಟೆಯಾಡಲಾಗದೆ, ಮನುಷ್ಯನನ್ನು ಹಿಡಿದು ತಿನ್ನುವ ನರಭಕ್ಷಕವಾಗುವುದು ಎಂದು ಜಿಮ್ ಕಾರ್ಬೆಟ್ ಮತ್ತು ಕೆನೆತ್

ಆಂಡರ್ ಸನ್ ಅವರು ತಮ್ಮ ಸಂಶೋಧನೆಯಿಂದ ತಿಳಿಸಿದ್ದಾರೆ. ಅವು ಓಡಾಡುವ ದಾರಿಯಲ್ಲಿ ಒಂದು ಬಲೆ ಅಥವಾ ಹಳ್ಳವನ್ನು ಕಾಣದಂತೆ ಏರ್ಪಡಿಸಿದ್ದರೆ, ಮತ್ತೊಮ್ಮೆ ಅದೇ ಪ್ರಾಣಿ ಅದೇ ಸ್ಥಳದಲ್ಲಿ ಹೋಗುವಾಗ ಅದನ್ನು ನೆನಪಿನಿಂದ ತಿಳಿಯಲಾರದು. ಅಷ್ಟೇನೂ ವೇಗವಾಗಿ ಓಡಲಾಗದ ಮನುಷ್ಯನ ತಂತ್ರಕ್ಕೆ ಬಲಿಯಾಗುವುದು. ಮತ್ತೊಂದು ಅಚ್ಚರಿಯ ಸಂಗತಿ ಎಂದರೆ, ಹೆಣ್ಣು ಹುಲಿ ತನ್ನ ಮರಿಗಳನ್ನು ಕಷ್ಟಪಟ್ಟು ಸಾಕಿ ಸಲಹುವುದಾದರೂ, ಸ್ವಲ್ಪ ಕಾಲದ ನಂತರ, ಮರಿಗಳು ಬೇಟೆಯಾಡಿ ತಮ್ಮ ಆಹಾರವನ್ನು ತಾವೇ ಪಡೆದುಕೊಳ್ಳುವ ಸ್ಥಿತಿಗೆ ಬಂದಾಗ ಅದು ತನ್ನ ಮಕ್ಕಳನ್ನು ತನ್ನೊಂದಿಗೆ ಇರಲು ಬಿಡದೆ ಓಡಿಸಿಬಿಡುತ್ತದೆ. ನಂತರ, ಯಾವಾಗಲಾದರೂ ತಾಯಿ ಮಕ್ಕಳು, ಸಹೋದರ ಸಹೋದರಿ ಯರು ಎದುರಾದರೆ, ಅವು ಪರಸ್ಪರ ಗುರುತುಹಿಡಿಯಲಾರವು. ಅವಕ್ಕೆ ನೆನಪಿರುವುದಿಲ್ಲ! ಹುಲಿಯ ಸಂಸಾರವೊಂದನ್ನು ಅನು ಸರಿಸಿ, ಹಿಂಬಾಲಿಸಿ ಶ್ರಮಪಟ್ಟು ಈ ಸಂಗತಿಯನ್ನು ಕಂಡುಹಿಡಿದ ಕಥೆಯನ್ನು ಕೆನೆತ್ ಆಂಡರ್‌ಸನ್ ಬರೆದಿರುವರು.

**ಮಾನವನೇಕೆ ಸೃಷ್ಟಿಯನ್ನು ಮೀರಿ ಹೋಗಬೇಕು? – ಸ್ವಾಮಿ ವಿವೇಕಾನಂದರ ಉತ್ತರ :** ಮನುಷ್ಯ ತನ್ನ ಹೊರಗಡೆ ಇರುವುದನ್ನು, ತನಗೆ ಅರ್ಥವಾಗುವುದನ್ನು ಅರ್ಥವಾಗುವಷ್ಟನ್ನು ತಿಳಿದುಕೊಂಡು ಅಷ್ಟರಲ್ಲಿ ತೃಪ್ತನಾಗಿರುವುದಿಲ್ಲವೇಕೆ? ತಿಳಿಯಲಾರದುದನ್ನು, ತಿಳಿಯಲಾಗದುದನ್ನು ತಿಳಿಯಲು ಶ್ರಮಪಡುವನೇಕೆ ಎಂಬ ಪ್ರಶ್ನೆಗಳನ್ನು ಶ್ರೋತೃಗಳ ಮುಂದಿಟ್ಟು ಸ್ವಾಮಿ ವಿವೇಕಾನಂದರು ತಮ್ಮ ಪ್ರವಚನವೊಂದರಲ್ಲಿ ಅವಕ್ಕೆ ಉತ್ತರವನ್ನು ಕೊಡುವರು. ಸೃಷ್ಟಿ ಏಕೆ ಹೀಗಿದೆ, ಇದಕ್ಕೆ ನಿಯಮವಿದೆಯೇ, ಇದು ಹೇಗೆ ಉದ್ಭವಿಸಿತು, ಇದರ ಆದಿಯೇನು, ಮಾನವನಿಗೂ ಇದಕ್ಕೂ ಸಂಬಂಧವಿದೆಯೇ, ಮಾನವನ ಉಗಮ, ವಿಕಾಸ ಮತ್ತು ಅಂತ್ಯ ಹೇಗೆ ಮೊದಲಾದ ವಿಷಯಗಳು ಪ್ರಪಂಚಾದ್ಯಂತ ಎಲ್ಲಾ ಕಾಲದಲ್ಲಿಯೂ ವಿಶ್ಲೇಷಿಸಲ್ಪಟ್ಟಿವೆ. ಇದನ್ನು ಎರಡು ಮಾರ್ಗಗಳಲ್ಲಿ ವಿವೇಚಿಸಲಾಗಿದೆ. ಒಂದು ಬುದ್ಧಿಯ ಮೂಲಕ, ಇನ್ನೊಂದು ಮನಸ್ಸಿನ ಮೂಲಕ. ಮೊದಲನೆಯದು ಭೌತಿಕ ವಿಜ್ಞಾನ, ಇಂದ್ರಿಯ ಪ್ರಪಂಚಕ್ಕೆ ಸೇರಿದುದು. ಇದನ್ನು ವಿಶೇಷವಾಗಿ ಪಾಶ್ಚಾತ್ಯರು ಮಾಡಿದರು. ಎರಡನೆಯದು ಮನೋವಿಶ್ಲೇಷಣೆಯಿಂದ. ಇದು ಆಂತರಿಕ ಮಾರ್ಗ. ಈ ಎರಡನೆಯ ಮಾರ್ಗವೇ ಸಾಂಖ್ಯ ದರ್ಶನ. ಇದರ ಕರ್ತೃ ಕಪಿಲ ಮುನಿ. ಭೌತಿಕ ವಿಜ್ಞಾನ ಎಲ್ಲಿಗೆ ನಿಲ್ಲುವುದೋ ಅಲ್ಲಿಂದ ಮುಂದಕ್ಕೆ ಇದು ಹೋಗುವುದು. ಇವರು ಭಾರತದ ಅತ್ಯಂತ ಶ್ರೇಷ್ಠ ಮನೋವಿಜ್ಞಾನಿಗಳು. ಇವರಿಗೆ ಋಣಿಗಳಾಗಿರದ ಮನಶ್ಶಾಸ್ತ್ರಜ್ಞರು ಪ್ರಪಂಚದಲ್ಲಿ ಎಲ್ಲಿಯೂ ಇಲ್ಲ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಸಾಂಖ್ಯ ದರ್ಶನದಲ್ಲಿ ಕಪಿಲರು ಸೃಷ್ಟಿ ಹೇಗೆ 'ಪ್ರಾರಂಭ'ವಾಗುವುದು, ಹೇಗೆ 'ಕೊನೆ' ಯಾಗುವುದು, ಹೇಗೆ ಅದು ಅನಾದಿ ಮತ್ತು ಅನಂತ – ಇವನ್ನೆಲ್ಲಾ ವೈಜ್ಞಾನಿಕವಾಗಿ, ತಾರ್ಕಿಕವಾಗಿ ವಿವರಿಸಿದ್ದಾರೆ.

ಸಾಧನ, ಮಾರ್ಗ ಯಾವುದೇ ಆದರೂ ಅದು ಸೇರುವ ಸತ್ಯ ಒಂದೇ ಆಗಿರಬೇಕು, ಅದರಲ್ಲಿ ವಿರೋಧವಿರುವುದಿಲ್ಲ, ಅದು ಸತ್ಯವಾಗಿದ್ದರೆ. ನಮ್ಮಲ್ಲಿ (ಪೌರ್ವಾತ್ಯರಲ್ಲಿ) ಧರ್ಮ ಮತ್ತು ತತ್ತ್ವ ಬೇರೆಬೇರೆಯಲ್ಲ. ಅವೆರಡೂ ಒಂದೇ. ಧರ್ಮ ಇಂದ್ರಿಯಾತೀತವಾದುದು. ಅದು ಹೊರಗಡೆಯಿಂದ ಬರುವುದಿಲ್ಲ, ಒಳಗಿನಿಂದ ಬರುತ್ತದೆ. ಧಾರ್ಮಿಕ ಆಲೋಚನೆ ಮಾನವನಲ್ಲಿ ಅಂತರ್ಗತವಾಗಿದೆ. 'ಮಾನವನು ತಿಳಿಯಬೇಕಾದ ಅತ್ಯಂತ ಶ್ರೇಷ್ಠವಾದ ವಿಷಯ, ಮಾನವನೇ!' ಎಂದು ಭಾರತೀಯನೊಬ್ಬ ಸಾಕ್ರಟೀಸನಿಗೆ ಹೇಳಿದನಂತೆ. ಸ್ಥೂಲವಾದುದು ಸೂಕ್ಷ್ಮವಾದುದರಲ್ಲಿ ವಿಲೀನವಾಗುವುದು. ಯಾವುದು ಮಾನವನಿಗೆ, ಇಂದ್ರಿಯಕ್ಕೆ ಅತೀತವೋ ಅದೇ ಧರ್ಮ. ಅದನ್ನು ತಿಳಿಯುವುದಕ್ಕೆ ಮಾನವನನ್ನು ಯಾವುದೋ ಶಕ್ತಿ ದೂಡುತ್ತಿರುವುದು. ಅದೇ ಮಾನವನಿಗೂ ಮೃಗಗಳಿಗೂ ಇರುವ ವ್ಯತ್ಯಾಸ. ಮನುಷ್ಯ ಪ್ರಾಣಿಯೊಂದೇ ಸಹಜವಾಗಿ ಕತ್ತೆತ್ತಿ ಮೇಲೆ ನೋಡುವುದು. ಮನುಷ್ಯನ ಮೆದುಳಿನಲ್ಲಿ ಆಧ್ಯಾತ್ಮಿಕ ಆಲೋಚನೆ ಅಪಾರವಾಗಿದೆ. ಧರ್ಮ ಮಾನವನ ಇಡೀ ಜೀವನದಲ್ಲಿ ಹಾಸುಹೊಕ್ಕಾಗಿದೆ. ನಾವು ಎಲ್ಲಿಂದ ಬಂದೆವೋ ಅಲ್ಲಿಗೆ ಹೋಗಬೇಕಾಗಿದೆ. ನಾವು ನಮ್ಮಲ್ಲಿರುವ ದೈವತ್ವದಲ್ಲಿ ಒಂದಾಗಬೇಕಾಗಿದೆ. ಈ ಐಕ್ಯತೆಯನ್ನು ತಿಳಿಯುವುದೇ 'ಜ್ಞಾನ' ಎಂಬುದರ ಅರ್ಥ.

ಸ್ವಾಮಿ ವಿವೇಕಾನಂದರು, ೧೮೯೩ರಲ್ಲಿ ಚಿಕಾಗೊ ಸರ್ವಧರ್ಮಸಮ್ಮೇಳನದಲ್ಲಿ ಭಾಗವಹಿಸಿ ಜಗತ್ಪ್ರಸಿದ್ಧರಾದ ನಂತರ, ನ್ಯೂಯಾರ್ಕ್‌ನಲ್ಲಿ ತಮ್ಮ ಪ್ರವಚನಗಳನ್ನು ಮುಂದುವರಿಸಿದರು. ಅವರ ಸಹಾಯಕ್ಕಾಗಿ ಸ್ವಾಮಿ ಶಾರದಾನಂದರು ೧೮೯೬ರಲ್ಲಿ ಅಲ್ಲಿಗೆ ಹೋಗಿದ್ದರು. ಸ್ವಾಮೀಜಿಯವರು ಒಂದು ಸಣ್ಣ ತರಗತಿಗೆ ಧರ್ಮ ಮತ್ತು ತತ್ತ್ವದ ಮೇಲೆ ಏಳು ಉಪನ್ಯಾಸಗಳನ್ನು ಕೊಟ್ಟರು. ಅವರ ವದನಾರವಿಂದದಿಂದ ನಿರರ್ಗಳವಾಗಿ ಹರಿದು ಬಂದ ಜ್ಞಾನಪ್ರವಾಹದಿಂದ ಮುಗ್ಧರಾದ ಸ್ವಾಮಿ ಶಾರದಾನಂದರು ಅವನ್ನೆಲ್ಲಾ ಕ್ರೋಡೀಕರಿಸಿ ಒಂದು ಮುನ್ನುಡಿಯನ್ನು ಬರೆದು, 'ಧರ್ಮದ ವಿಜ್ಞಾನ ಮತ್ತು ತತ್ತ್ವ' (The Science and Philosophy of Religion) ಎಂಬ ಶೀರ್ಷಿಕೆಯನ್ನು ಕೊಟ್ಟು 'ಉದ್ಬೋಧನ' ಪತ್ರಿಕೆಯಲ್ಲಿ ಪ್ರಕಟಿಸಿದರು. 'ಉದ್ಬೋಧನ'ದಲ್ಲಿ ಹನ್ನೊಂದು ಆವೃತ್ತಿಗಳಾದ ನಂತರ ಅದ್ವೈತ ಆಶ್ರಮದವರು ಅದರ ಪ್ರಕಟಣೆಯನ್ನು ಮುಂದುವರಿಸಿದರು. ಮೇಲೆ ಕೊಟ್ಟಿರುವ ವಿವರಣೆ, ಸ್ವಾಮೀಜಿಯವರ ಪ್ರವಚನಮಾಲೆಯ ಪ್ರಾರಂಭದಲ್ಲಿ ಬರುವುದು. ಸ್ವಾಮೀಜಿಯವರ ಸರಳ, ಮನೋಜ್ಞ ಮಂಡನೆ, ಮತ್ತು ವೇದಾಂತವು ಹೇಗೆ ಸಾಂಖ್ಯ ದರ್ಶನವನ್ನು ಪೂರ್ಣಗೊಳಿಸುವುದು ಎಂಬುದನ್ನು ಓದಿದರೆ ಸೃಷ್ಟಿ-ಮಾನವ ಸಂಬಂಧ ನಮಗೆ ಸ್ಪಷ್ಟವಾಗಿ ತಿಳಿಯುವುದು. ಅಲ್ಲದೆ ನಮ್ಮ ಜೀವನದ ಗುರಿ ಮನದಟ್ಟಾಗಿ ಧನ್ಯತೆ